# ಅವಳ ಅಂತ್ಯ




**ಎಲ್ಲಿಂದಳೋ ಬಂದವಳು ಆವಳು. ಬೇಕಾಬಿಟ್ಟಿಯಾಗಿ ಆವಳನ್ನು ಬಳಸಿಕೊಂಡರು. ಆವಳ ಚಾರಿತ್ರ್ಯ ತಿಳಿದ ಮೇಲೂ ಒಬ್ಬನು ಮದುವೆಯಾಗಲು ಮುಂದೆ ಬಂದ!**

■ ವೆಂಕಟೇಶ ಕೆ. ಜನಾದ್ರಿ

ಅವಳ ಸುತ್ತ ನೊಣಗಳು ಗಾಯನ ನಡೆಸಿದ್ದವು. ಬಾಯಿಯಲ್ಲಿ ಭಯಂಕರ ದುರ್ಗಂಧದ ಜೊಲ್ಲು ಧಾರೆಯಾಗಿ ಸುರಿದು ಒಣಗಿಹೋಗಿತ್ತು, ಕಣ್ಣುಗಳಾಳದಿಂದ ನೀರಿಳಿದಿಳಿದು ಹೆಪ್ಪುಗಟ್ಟಿ ಸುತ್ತ ಜಿಗುಟಾದ ವಸ್ತು ಸಂಗ್ರಹವಾಗಿತ್ತು. ಮೈಯ ಮೇಲೆ ಅಲ್ಲಲ್ಲಿ ತರಚು ಗಾಯಗಳು, ಕಳಾಹೀನ ಕಣ್ಣುಗಳು, ಮುಖದಲ್ಲಿ ಅಮೂರ್ತ ನೋವಿನ ಎಳೆಗಳು. ಆ ಬಸ್ ಘಟಕದ ಹೊರ ಆವರಣದಲ್ಲಿಯೇ ಅವಳ ದೈನಂದಿನ ಬದುಕಿನ ಜಟಕಾ ಬಂಡಿ ಸಾಗಿತ್ತು. ಅವಳ ಹಿಂದೆ ಮುಂದೆ ಯಾರೂ ಇಲ್ಲವೆಂದೇ ಭಾವಿಸಿದ್ದ ನಾವುಗಳು ಅವಳ ಪಾಲಿನ ರಕ್ಷಕ, ಪೋಷಕರು. ಆದಿನ ಬೆಳ್ಳಂಬೆಳಿಗ್ಗೆ

(46ನೇ ಪುಟ ನೋಡಿ)